## ಮಾತು-ಕತೆ

◆ ನಿಮ್ಮ ಬಹುಚರ್ಚಿತ ಕಥಾ ಸಂಕಲನ 'ವಿಮುಕ್ತ' ಕನ್ನಡಕ್ಕೆ ಬಂದ ಈ ಸಂದರ್ಭದಲ್ಲಿ ಅದರ ಸುತ್ತಲೇ ಪ್ರಶ್ನೆ ಆರಂಭಿಸುತ್ತಿದ್ದೇನೆ, ರಾಮಾಯಣದಲ್ಲಿ ಅನ್ಯಾಯಕ್ಕೊಳಗಾದ ಶೂರ್ಪನಖಿ, ಅಹಲ್ಯೆ, ರೇಣುಕೆ, ಊರ್ಮಿಳೆ, ಮಂಡೋದರಿ, ಮುಂತಾದ ಪಾತ್ರಗಳನ್ನು ಈ ಸಂಕಲನದಲ್ಲಿ ಮರುನಿರ್ಮಿಸಿದ್ದೀರಿ, ಹೀಗೆ ಮಹಾಕಾವ್ಯಗಳನ್ನು ಸಾಂಪ್ರದಾಯಿಕ ವ್ಯಾಖ್ಯಾನದಿಂದ ಮುಕ್ತಿಗೊಳಿಸಿದ ಕ್ಷಣದಲ್ಲಿ, ನಿಮ್ಮ ಮನಸ್ಸಿಗೆ ದೊರೆತ ನಿರಾಳತೆ ಏನು? ಮತ್ತು ತೆಲುಗು ಓದುಗರ ಅನಿಸಿಕೆ ಹೇಗಿತ್ತು?

ಶೂರ್ಪನಖಿ ಮುಂತಾದ ಸ್ತ್ರೀಪಾತ್ರಗಳ ಬಗ್ಗೆ ನಾನು ಅನೇಕ ದಿನಗಳಿಂದ ಯೋಚಿಸುತ್ತಿದ್ದೆ. ಅದರಲ್ಲೂ ನನ್ನನ್ನು ತುಂಬಾ ಕಾಡುತ್ತಿದ್ದ ಶೂರ್ಪನಖಿ ಮತ್ತು ಮಂಡೋದರಿ ಪಾತ್ರಗಳು ಅನುಭವಿಸಿದ ನೋವುಗಳನ್ನು ಬರಹಕ್ಕೆ ಇಳಿಸುವುದು ಹೇಗೆ ಎಂದು ತುಂಬಾ ಯೋಚಿಸಿದ ಮೇಲೆ ಮೊದಲಿಗೆ ನಾನು ಶೂರ್ಪನಖಿಯ ಬಗ್ಗೆ ಕಥೆ ಬರೆದೆ. ರಾಮನನ್ನು ಬಯಸಿ ತಪ್ಪು ಮಾಡಿದ ಕೆಟ್ಟ ಹೆಂಗಸಾದ ಶೂರ್ಪನಖಿ ತನ್ನ ಜೀವನದಲ್ಲಿ ಯಾವ ನೋವನ್ನೂ ಅನುಭವಿಸಿಲ್ಲ ಎಂಬಂತಹ ಮಾತುಗಳನ್ನೇ ಕೇಳುತ್ತಾ ಬಂದ ನನಗೆ ಶೂರ್ಪನಖಿಯನ್ನು ಬೇರೊಂದು ದೃಷ್ಟಿಯಲ್ಲಿ ನೋಡುವುದು ಅವಶ್ಯವೆನಿಸಿತ್ತು, ತನ್ನ ದೇಹದೊಳಗಿನ ಮುಖ್ಯವಾದ ಅಂಗವನ್ನು ಕಳೆದುಕೊಂಡು ಕ್ರೌರ್ಯಕ್ಕೆ ಬಲಿಯಾದ ಶೂರ್ಪನಖಿ ಅದೆಷ್ಟು ಆಕ್ರೋಶ, ನೋವು, ಹಿಂಸೆಯನ್ನು ಅನುಭವಿಸಿರಬಹುದು ಎಂಬುದರ ಬಗ್ಗೆ ನನಗೆ ಬೆಳಕು ಚೆಲ್ಲಬೇಕೆನಿಸಿತು. ಅಪಾರ ದುಃಖ, ಕ್ರೋಧ, ಅವಮಾನಗಳಿಂದ ಹೊರಬಂದು, ಮನಸ್ಸನ್ನು ಯಥಾ ನಿರ್ಮಲವಾಗಿಸಿಕೊಂಡು ಜೀವನ ಸಾಗಿಸುವ ಮಹಾಯಜ್ಞವನ್ನು ಶೂರ್ಪನಖಿ ಹೇಗೆ ಕೈಗೊಂಡಳು ಎಂಬುದು ನನ್ನ 'ಸಮಾಗಮ' ಕತೆಯಲ್ಲಿದೆ. ಸೀತೆ ಮತ್ತು ಶೂರ್ಪನಖಿ ಬೇರೆ ಬೇರೆ ಕಾರಣಗಳಿಗೆ ರಾಮನಿಂದಾಗಿ ನೋವುಂಡವರೇ. ಶೂರ್ಪನಖಿಯ ಕತೆ ಸೀತೆಗೆ, ರಾಮನಿಂದಲೇ ಕಾಡಿಗೆ ದೂಡಲ್ಪಟ್ಟ ಸೀತೆಯ ಕತೆ ಶೂರ್ಪನಖಿಗೆ ತಿಳಿಯಬೇಕಿದೆ. ಆ ಕಾರಣಕ್ಕಾಗಿ ವಾಲ್ಮೀಕಿ ಆಶ್ರಮದಲ್ಲಿದ್ದ ಸೀತೆಯೂ, ಅಲ್ಲೇ ಪಕ್ಕದ ಕಾಡಿನಲ್ಲಿರುವ ಶೂರ್ಪನಖಿಯೂ ಪರಸ್ಪರ ಭೇಟಿಯಾಗುವ ಸನ್ನಿವೇಶವನ್ನು ಸೃಷ್ಟಿಸಿ ಇಬ್ಬರ ನಡುವೆ ಆತ್ಮೀಯ ಸಂಭಾಷಣೆ ನಡೆಯುವಂತೆ ಚಿತ್ರಿಸಿದ್ದೇನೆ. ಸಂಕಲನದ ಉಳಿದೆಲ್ಲ ಕತೆಗಳನ್ನು ಬರೆದಾಗಲೂ ನನಗೆ ಇನ್ನಿಲ್ಲದಷ್ಟು ಸಂತೋಷವಾಯಿತು. ಓದುಗರೂ ಸಹ ಈ ಕತೆಗಳನ್ನು ತುಂಬಾ ಮೆಚ್ಚಿಕೊಂಡರು. ಪುರಾಣಗಳ ಕುರಿತಾದ ಇಷ್ಟು ಸಕಾರಾತ್ಮಕವಾದ ಮರುಕಥನಗಳು ಇಲ್ಲವೆಂದೇ ಎಲ್ಲರೂ ಹೇಳಿದರು.

ಬರಹಗಾರನ ಸೃಜನಶೀಲತೆಗೆ ಪ್ರಶಸ್ತಿಗಳ ಅವಶ್ಯಕತೆ ಖಂಡಿತ ಇಲ್ಲ. ಆದರೆ ಬರಹಗಾರನಿಗೆ ಪ್ರಶಸ್ತಿಗಳು ಒಂದು ಬಗೆಯ ಆತ್ಮವಿಶ್ವಾಸವನ್ನು ನೀಡಬಲ್ಲವು. ಒಂದು ಸೂಕ್ಷ್ಮ ಸಂಗತಿಯನ್ನು ಹೇಳಲು ಹೊರಟಿರುವ ಬರಹಗಾರನಿಗೆ ಸುತ್ತಲಿನ ಸಮಾಜ ಅದನ್ನು ಪ್ರೋತ್ಸಾಹಿಸುವ ಬೆಂಬಲ ನೀಡುವ ಸೂಚನೆಯೇ ಪ್ರಶಸ್ತಿಗಳು.

◆ ಪರಸ್ಪರ ಸೋದರಿತ್ವದ ಭಾವ ತುಂಬುವುದರ ಮೂಲಕವೇ ಒಟ್ಟೂ ಮಹಿಳೆಯರ ಬಿಡುಗಡೆ ಸಾಧ್ಯವೆಂಬುದನ್ನು ಮನದಟ್ಟು ಮಾಡುವ ಈ ಕೃತಿಯ ಕತೆಗಳು ಇಂದಿನ ಮಹಿಳಾ ಓದುಗರಿಗೆ ಇನ್ನೂ ಯಾವ ಬಗೆಯ ಬೆಳಕನ್ನು ಕಟ್ಟಿಕೊಡಬಲ್ಲವು ಎನ್ನುತ್ತೀರಿ?

ಬರವಣಿಗೆಯ ಮೂಲಕ ಸೋದರಿತ್ವ ಭಾವನೆಯನ್ನು ಅದರಲ್ಲೂ 'ಫೆಮಿನಿಸ್ಟ್ ಸಿಸ್ಟರ್‌ಹುಡ್' ಅನ್ನು ಪಸರಿಸುವುದು ನನ್ನ ಮುಖ್ಯ ಉದ್ದೇಶ ಎಂಬುದನ್ನು ನಾನು ನಿರಂತರವಾಗಿ ಹೇಳುತ್ತಿದ್ದೇನೆ. ಇಂದಿನ ದಿನಮಾನಗಳಲ್ಲಿ